**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

ಎಸ್.ಸಿ. ಸಂಖ್ಯೆ 199/2025

| | | |
|---|---|---|
| ಸಾಕ್ಷಿದಾರರ ಹೆಸರು | : ಅಬ್ದುಲ್ | ಪಿಡಬ್ಲ್ಯೂ ಃ 11 |
| ತಂದೆಯ ಹೆಸರು | : ಅಮ್ಜಾ | ಸಿಡಬ್ಲ್ಯೂ ಃ 8 |
| ವಯಸ್ಸು | : 30 ವರ್ಷ | |
| ಉದ್ಯೋಗ | : ಕೂಲಿ ಕೆಲಸ | |
| ವಾಸಸ್ಥಳ | : ಮಂಡಿ ಮೊಹಲ್ಲಾ | |

**ಸಾಕ್ಷಿಯನ್ನು ಈ ದಿನ ದಿಃ 07.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

**1.** ನಾನು ಮೇಲೆ ಹೇಳಿದ ವಿಳಾಸದಲ್ಲಿ ಹಲವು ವರ್ಷಗಳಿಂದ ವಾಸವಿರುತ್ತೇನೆ.

**2.** ಸಾಕ್ಷಿಯೂ ಸಹಿಯನ್ನು ತೋರಿಸಿ ಗುರುತಿಸಲು ಕೇಳಿದಾಗ, ಸಾಕ್ಷಿಯೂ ನೋಡಿ ಗುರುತಿಸಿದ್ದು, ಸದರಿ ದಾಖಲೆಯು ದಿ.14.12.2022 ರ ಅಮಾನತ್ತು ಮಹಜರ್ ಆಗಿದ್ದು, ಅದನ್ನು ಈಗಾಗಲೇ ಮೂಲ ಕಡತ ಎಸ್.ಸಿ ಸಂಖ್ಯೆ– 246/2023 ರಲ್ಲಿ ನಿಪಿ.15 ಎಂದು, ಸಾಕ್ಷಿಯ ಸಹಿಯನ್ನು ನಿಪಿ.15(ಎ) ಎಂದು ಗುರುತಿಸಲಾಗಿರುತ್ತದೆ. ಸದರಿ ದಾಖಲೆಗೆ ನಾನು ಬನ್ನಿ ಮಂಟಪದ ರಸ್ತೆಯಲ್ಲಿ ಶಾದಿ ಮಹಲ್ ಬಳಿಯಿಂದ ಬರುತ್ತಿದಾಗ, ಪೊಲೀಸರು ದಾಖಲೆಗೆ ಸಹಿ ಮಾಡಲು ಕೇಳಿದ್ದು, ಸದರಿ ಸಹಿಯನ್ನು ನಾನು ಸಹಿ ಮಾಡಿರುತ್ತೇನೆ. ಪೊಲೀಸ್ ಠಾಣೆಯಲ್ಲಿ ಯಾವುದೇ ಸಹಿಯನ್ನು ಮಾಡಿರುವುದಿಲ್ಲ. ಸಾಕ್ಷಿಯೂ ಸಹಿಯನ್ನು

ತೋರಿಸಿ ಗುರುತಿಸಲು ಕೇಳಿದಾಗ, ಸಾಕ್ಷಿಯೂ  ನೋಡಿ ಗುರುತಿಸಿದ್ದು, ಸದರಿ ದಾಖಲೆಯು ದಿ.14.12.2022 ರ ಅಮಾನತ್ತು ಮಹಜರ್  ಆಗಿದ್ದು, ಅದನ್ನು ಈಗಾಗಲೇ ಮೂಲ ಕಡತ ಎಸ್.ಸಿ ಸಂಖ್ಯೆ:- 246/2023 ರಲ್ಲಿ ನಿಪಿ.16 ಎಂದು, ಸಾಕ್ಷಿಯ ಸಹಿಯನ್ನು ನಿಪಿ.16(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಯಾವಾಗ ಮಾಡಿರುತ್ತೇನೆ ಎಂದು ನನಗೆ ಅಷ್ಟಾಗಿ ನೆನಪಿರುವುದಿಲ್ಲ. ಪೊಲೀಸರು ನನಗೆ ಯಾವ ಕಾರಣಕ್ಕೆ ಸಹಿ ಪಡೆದಿರುತ್ತಾರೆ ಎಂದು ಹೇಳಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿತರನ್ನು ನಾನು ನೋಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ  ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

<u>ಪಾಟೀ ಸವಾಲು : ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

3. ದಿ.14.12.2022 ರಂದು ಪೊಲೀಸರು ನನ್ನನು ಠಾಣೆಗೆ ಕರೆಸಿದ್ದು,  ಅಲ್ಲಿ 1 ಮತ್ತು 2 ನೇ ಆರೋಪಿತರು ಹಾಜರಿದ್ದರು. ಪೊಲೀಸರು ಅವರಿಂದ ಕೆಲವು ಬಟ್ಟೆಗಳನ್ನು ಅಮಾನತ್ತುಪಡಿಸಿಕೊಳ್ಳುವುದಿದೆ, ಸಾಕ್ಷಿದಾರರಾಗಬೇಕಂದು ಕೇಳಿದಾಗ ನಾನು ಅದಕ್ಕೆ ಒಪ್ಪಿರುತ್ತೇನೆ. ನನ್ನ ಸಮಕ್ಷಮ 1 ನೇ ಆರೋಪಿಯು ರಕ್ತದ ಕಲೆಯಾಗಿರುವ ಒಂದು ಕಡು ನೀಲಿ ಬಣ್ಣದ ರೆಡಿಮೇಡ್ ಶರ್ಟ್ ಮತ್ತು ತಿಳಿ ನೀಲಿ ಸಿಮೆಂಟ್ ಕಲರ್ ನ  ಪ್ಯಾಂಟ್ ನ್ನು ಹಾಜರುಪಡಿಸಿದರು. 2 ನೇ ಆರೋಪಿ ಒಂದು ತಿಳಿ ಗುಲಾಬಿ ಬಣ್ಣದ ಶರ್ಟ್, ಹಸಿರು ಕಂದು ಹಳದಿ ಬಣ್ಣದ ಪ್ಯಾಂಟ್ , ಹಾಗೂ ಪ್ಯಾಂಟ್ ನ ಬಲ ಭಾಗದ ಜೇಬಿ ನಲ್ಲಿ ಕಟರ್ ಬ್ಲೇಡ್

ಇದ್ದು, ಅದನ್ನೂ ಸಹ ಹಾಜರುಪಡಿಸಿದರು. ಅಲ್ಲದೇ ಪೊಲೀಸ್ ಠಾಣೆಯ ಹೊರಗಡೆ **KA 05 B 5019** ನಂಬರ್ ಆಟೋ ನಿಂತಿದ್ದು , ಅವುಗಳನ್ನು ಪೊಲೀಸರು ನನ್ನ ಸಮಕ್ಷಮ ಅಮಾನತ್ತು ಮಹಜರ್ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಾನು ಸದರಿ ಮಹಜರ್ ಕೂಡ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮಹಜರ್ ನ ವಿಚಾರ ತಿಳಿದರುತ್ತದೆ ಎಂದರೆ ಸರಿಯಲ್ಲ.

**4.** ಅದೇ ದಿನ 1 ನೇ ಆರೋಪಿ ನನ್ನನ್ನು ಮತ್ತು ಪೊಲೀಸರನ್ನು ಬನ್ನಿಮಂಟಪದ ಸೆಂಟ್ ಫಿಲೋಮಿನಾ ಕಾಲೇಜಿನ ಬಳಿ ಕರದುಕೊಂಡು ಹೋಗಿ, ಅಲ್ಲಿ ಕಾಂಪೌಂಡ್ ಪಕ್ಕದ ಒಂದು ಮೋರಿಯಲ್ಲಿ ಚಾಕುವನ್ನು ಎಸೆದಿರುವುದಾಗಿ ಹೇಳಿ , ಸದರಿ ಚಾಕುವನ್ನು ತೆಗೆದು ನನ್ನ ಸಮಕ್ಷಮ ಪೊಲೀಸರ ಮುಂದೆ ಹಾಜರುಪಡಿಸಿರುತ್ತಾರೆ. ಆಗ ಪೊಲೀಸರು ಸದರಿ ಚಾಕುವನ್ನು ಪಡೆದುಕೊಂಡು, ಸದರಿ ಚಾಕುವಿಗೆ ರಕ್ತದ ಕಲೆಯಾಗಿರುತ್ತದೆ. ಪೊಲೀಸರ ಮಹಜರ್ ಜರುಗಿಸಿ, ಸದರಿ ಚಾಕುವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**5.** ಸಾಕ್ಷಿಗೆ ಪೋಟೋವನ್ನು ತೋರಿಸಿ, ತನ್ನನ್ನು ಗುರುತಿಸಲು ಕೇಳಿದಾಗ ಸಾಕ್ಷಿಯು ತನನ್ನು ನೋಡಿ ಗುರುತಿಸಿದ್ದು, ಸದರಿ ಪೋಟೋಗಳನ್ನು ಠಾಣೆಯಲ್ಲಿ ತೆಗೆದ ಪೋಟೋಗಳಾಗಿದ್ದು, ಸದರಿ 7 ಪೋಟೋಗಳನ್ನು ಈಗಾಗಲೇ ಮೂಲ ಕಡತ ಎಸ್.ಸಿ ಸಂಖ್ಯೆ– **246/2023** ರಲ್ಲಿ ನಿಪಿ.17 ಎಂದು ಗುರುತಿಸಲಾಗಿರುತ್ತದೆ. ಬನ್ನಿ ಮಂಟಪದ ಕಾಲೇಜಿನ ಬಳಿ ಅಮಾನತ್ತು ಕಾಲದಲ್ಲಿ ತೆಗೆದ ಒಂದು ಪೋಟೋವನ್ನು ಈಗಾಗಲೇ ಮೂಲ ಕಡತ ಎಸ್.ಸಿ ಸಂಖ್ಯೆ– **246/2023** ರಲ್ಲಿ ನಿಪಿ.18 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯೂ ಮುಂದುವರೆದು ನನಗೆ ಏನು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎಲ್ಲಾ ವಿಚಾರ

ತಿಳಿದಿದ್ದರೂ ಎರಡು ಮಹಜರ್ ನ ಬಗ್ಗೆ ಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 3 ನೇ ಆರೋಪಿ ಪರ ವಕೀಲರಿಂದಃ

ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರ.

ಮರು ವಿಚಾರಣೆ ಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

Sd/-
**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**